# ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

**"ಅಭಿವೃದ್ಧಿ ಭವನ"** ಐವಾನ-ಎ-ಶಾಹಿ, ಕಲಬುರಗಿ-585102

ದೂರವಾಣಿ: (08472) - 256767,239556,255564, ಫ್ಯಾಕ್ಸ್ : (08472) 227527

Email: hkadbgulb@gmail.com Website: hkrdb.kar.nic.in


ಸಂಖ್ಯೆ: ಕಕಪ್ರಅಮಂ/ಸಿಬ್ಬಂದಿ/38/2023-24 ದಿನಾಂಕ: 20.10.2023

**-: ಪ್ರಕಟಣೆ :-**

ವಿಷಯ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ ಕಾರ್ಯಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾನೂನು ಅಧಿಕಾರಿಗಳನ್ನು ನೇಮಕ ಮಾಡುವ ಕುರಿತು.

~ @ ~

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ ಕಾರ್ಯಾಲಯಕ್ಕಾಗಿ ಗುತ್ತಿಗೆ ಆಧಾರದ ಮೇಲೆ ಕಾನೂನು ಅಧಿಕಾರಿ ಹುದ್ದೆಗೆ ಕ.ಕ.ಪ್ರ.ಅ.ಮಂಡಳಿ ವ್ಯಾಪ್ತಿಗೆ ಸಂಬಂಧಪಟ್ಟಂತೆ ದಾವೆಗಳಿಗೆ ಸಂಬಂಧಿಸಿದ ನ್ಯಾಯಲಯಗಳಲ್ಲಿ ಕಾರ್ಯನಿರ್ವಹಿಸುವ ಉದ್ದೇಶಕ್ಕಾಗಿ ಈ ಕೆಳಕಂಡ ಅರ್ಹತೆಗಳನ್ನು ಒಳಗೊಂಡ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

| ಕ್ರ. ಸಂ | ಹುದ್ದೆಯ ವಿವರ | ವಿದ್ಯಾರ್ಹತೆ | ವೇತನ |
|---|---|---|---|
| 1] | ಕಾನೂನು ಅಧಿಕಾರಿ (Legal Officer) | 1. ಎಲ್.ಎಲ್.ಬಿ ಕಾನೂನು ಪದವೀಧರರಾಗಿರಬೇಕು.<br>2. ಅಖಿಲ ಭಾರತ ಬಾರ ಕೌನ್ಸಿಲನಲ್ಲಿ ಎನ್‌ರೋಲ್‌ಮೆಂಟ್ ಮಾಡಿಸಿರಬೇಕು.<br>3. ಸಿವಿಲ್ ಪ್ರಕರಣಗಳಲ್ಲಿ ಕನಿಷ್ಟ 05 ವರ್ಷಗಳ ಅನುಭವ ಹೊಂದಿರಬೇಕು. | ಮಾಸಿಕ ವೇತನ ರೂ.18,000/- |

1. ಸದರಿ ಹುದ್ದೆಗೆ ನಿಗದಿಯಾದವರು ಮಂಡಳಿಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ/ತಾಲೂಕು ನ್ಯಾಯಲಯಗಳಲ್ಲಿ ದಾಖಲಾದ ಪ್ರಕರಣಗಳಿಗೆ ಖುದ್ದಾಗಿ ಹಾಜರಾಗಬೇಕು.
2. ಮಂಡಳಿಯ ಪ್ರಕರಣಗಳಲ್ಲಿ ಕಾನೂನು ಅಭಿಪ್ರಾಯ ನೀಡುವದಕ್ಕಾಗಿ ಪ್ರತಿ ವರ್ಷಕ್ಕೆ ರೂ. 3,000+ಇತರೆ ವೆಚ್ಚದ ಮೊತ್ತವನ್ನು ಪಾವತಿಸಲಾಗುವದು.
3. ಮಂಡಳಿಯ ಪರವಾಗಿ (ಅಗ್ರಿಮೆಂಟ್) ಕರಾರು ಪತ್ರದ ಕರಡನ್ನು ಸಿದ್ದಪಡಿಸುವುದು ಮತ್ತು ಅಂತಿಮ ಗೊಳಿಸುವುದು.
4. ಸ್ವಂತ ವಕಾಲತ್ತನ್ನು ಮಾಡಬಹುದಾಗಿದೆ. ಆದರೆ ಮಂಡಳಿ ವಿರುದ್ಧವಾಗಿ ಯಾವುದೇ ನ್ಯಾಯಲಯದಲ್ಲಿ ಮೊಕದ್ದಮೆ (ಪ್ರಕರಣಗಳ) ಪಡೆಯತಕ್ಕದಲ್ಲ.
5. ಮಂಡಳಿಯ ಕಾನೂನು ವಿಷಯಗಳಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸಲು ಸದಾ ಲಭ್ಯರಾಗಿರತಕ್ಕದ್ದು,.
6. ಕನ್ನಡ ಮತ್ತು ಇಂಗ್ಲಿಷ್ ಚೆನ್ನಾಗಿ ತಿಳಿದವರಾಗಿರಬೇಕು
7. ನ್ಯಾಯಲಯದಲ್ಲಿ ದಾಖಲಾದ ಪ್ರಕರಣಗಳಿಗೆ ಖಂಡಿಕೆವಾರು ಉತ್ತರಗಳನ್ನು ತೈಯಾರಿಸಿ ಕೊಡಬೇಕು.
8. ಕಲಬುರಗಿ ಹೊರತುಪಡಿಸಿ, ಮಂಡಳಿಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ/ತಾಲೂಕು ನ್ಯಾಯಲಯಗಳಿಗೆ ಹಾಜರಾದಲ್ಲಿ ನಿಯಮಾನುಸಾರ ಅನ್ವಯವಾಗುವ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಪಾವತಿಸಲಾಗುವುದು.

ಮೇಲ್ಕಾಣಿಸಿದ ಅರ್ಹತಾ ಮಾನದಂಡಗಳನ್ನು ಹೊಂದಿದ ಅಭ್ಯರ್ಥಿಗಳು ದಿನಾಂಕ: 31.10.2023 ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ Resume ಅನ್ನು ಕಾರ್ಯದರ್ಶಿಗಳು, ಕ.ಕ.ಪ್ರ.ಅ.ಮಂ. ಕಲಬುರಗಿ ಇವರಿಗೆ ಸಲ್ಲಿಸಲು ಕೋರಲಾಗಿದೆ.

**Sd/-**
**ಕಾರ್ಯದರ್ಶಿ,**
**ಕ.ಕ.ಪ್ರ.ಅ.ಮಂಡಳಿ ಕಲಬುರಗಿ.**